

ಚಿತ್ರಪಟ ಕಥನ

**ಮಳೆಗಾಲದ ಸುಂದರ ದಿನಗಳಲ್ಲಿ ಸಂಸಾರ ಹೂಡುವ ಈ ಪುಟಾಣಿ ಮೊನಾರ್ಕ್ ಹಕ್ಕಿಗಳು, ತಮ್ಮದೊಂದು ಪುಟ್ಟ ಗೂಡು ಕಟ್ಟಿಕೊಳ್ಳುವ, ಮರಿ ಮಾಡಿ ಅವುಗಳನ್ನು ಅಕ್ಕರೆಯಿಂದ ಸಾಕಿ ಸಲಹುವ, ರೀತಿ ರಿವಾಜು ಕಲಿಸುವ ಪ್ರಕ್ರಿಯೆಯೇ ಸೋಜಿಗ.**

# ಕಪ್ಪು ಕತ್ತಿನ ರಾಜಹಕ್ಕಿಯ ಜಾಡುಹಿಡಿದು...

■ ಚಿಕ್ಕಾಯರಹಳ್ಳಿ ಡಿ. ಕೃಷ್ಣಚೈತನ್ಯ

ಮಲೆನಾಡಿನ ಮಳೆಯೆಂದರೆ ಮೈಯೆಲ್ಲಾ ಜುಂ ಎನ್ನುತ್ತದೆ. ಈಚೆಗೆ ಕೆಲವು ವರ್ಷಗಳಿಂದ ಮಳೆಗಾಲದಲ್ಲಿ ಬೀಳುವ ಭಾರೀ ಮಳೆ, ಬಿರುಗಾಳಿ ನೋಡಿದರೆ ಮನೆಯೊಳಗಿದ್ದರೂ ಹೆದರಿಕೆ. ಆದರೆ ಇಂಥ ಮಳೆಗಾಲವೇ ಈ ಪುಟಾಣಿ ಮೊನಾರ್ಕ್ ಹಕ್ಕಿಗಳು ಮರಿ ಮಾಡಿ ಸಂಸಾರ ಬೆಳೆಸಲು ಶುಭ ಸಮಯವಂತೆ.

ಪಕ್ಷಿಗಳ ಕುರಿತು ಅಧ್ಯಯನ ಮಾಡುತ್ತಿದ್ದರೂ, ಅವುಗಳ ಗೂಡು, ಮೊಟ್ಟೆ ಮತ್ತು ಮರಿಗಳ ಲಾಲನೆ–ಪಾಲನೆಗಳ ವಿವರ ದಾಖಲಿಸುತ್ತಿದ್ದನೇ ಹೊರತು ಛಾಯಾಗ್ರಹಣಕ್ಕಾಗಿ ಅವುಗಳ ಬೆನ್ನು ಬಿದ್ದವನಲ್ಲ. ಆದರೆ, 'ಈ ಕಾಲದಲ್ಲಿಯೇ ಸುಂದರ ಮೊನಾರ್ಕ್‌ಗಳು ಮೊಟ್ಟೆ ಇಡಲು ಗೂಡು ಕಟ್ಟುತ್ತವೆ, ಸ್ವಲ್ಪ ಗಮನಿಸು' ಎಂದು ಗೆಳೆಯ ಹೇಳಿದ್ದು ಕೇಳಿ, ಕಳೆದ ಮಳೆಗಾಲದಲ್ಲಿ ಈ ಹಕ್ಕಿಗಳ ಜಾಡು ಹಿಡಿದು ಹೊರಟೆ.

ಪ್ರತಿದಿನ ನಮ್ಮ ಮನೆ ಮುಂದಿರುವ ಹುಲ್ಲು ಹಾಸಿನ ಮಧ್ಯದ ಸಣ್ಣ ತೊಟ್ಟಿಗೆ ಮೂರ್ನಾಲ್ಕು ಬಾರಿ ನೀರು ಕುಡಿಯಲು, ಸ್ನಾನ ಮಾಡಲು ಬರುವ ಈ ಕಪ್ಪು ಕತ್ತಿನ ರಾಜಹಕ್ಕಿಗಳ ಚಿಲಿಪಿಲಿ ನನಗೆ ಚಿರಪರಿಚಿತ. ಜಲಕ್ರೀಡೆಗೆ ಬರುವ ಇವುಗಳ ಹಾದಿ ಹುಡುಕಿ ಹೊರಟ ನನಗೆ, ಸ್ವಲ್ಪ ದಿನಗಳಲ್ಲೇ ಇವುಗಳ ಗೂಡು ಪತ್ತೆಯಾಯಿತು. ನಮ್ಮ ಶಾಲೆ ಹಿಂಭಾಗದಲ್ಲಿನ ಕಾಫಿ ತೋಟದಲ್ಲೇ ಬೀಡು ಬಿಟ್ಟಿರುವುದನ್ನು ಕಂಡೆ. ಗೂಡು ಕಂಡಿದ್ದೇ, ಮನೆಯಿಂದ ಶಾಲೆಗೆ ಹೋಗುವಾಗ, ಬರುವಾಗ ಅದೇ ದಾರಿಯಲ್ಲಿ ಸಾಗಲು ಶುರುಮಾಡಿದೆ. ಒತ್ತೊತ್ತಾಗಿ ಬೆಳೆದಿದ್ದ ಗಿಡ ಮರಗಳ ನಡುವೆ ಗೂಡನ್ನು ಸಮೀಪಿಸುವುದೇ ಕಷ್ಟಕರವಾಗಿತ್ತು. ಅಂತೂ ಕೊನೆಗೆ ನಿಶ್ಯಬ್ದದ ಹೆಜ್ಜೆಯಿಟ್ಟು ಗೂಡು ಸಮೀಪಿಸುತ್ತಿದ್ದಂತೆ, ಕಾವು ಕೊಡುತ್ತಿದ್ದ ಹಕ್ಕಿ ಹಾರಿಹೋಯಿತು. ನಮ್ಮ ಎದೆ/ತಲೆ ಮಟ್ಟದಲ್ಲಿ ಇವು ಗೂಡು ಕಟ್ಟುವುದರಿಂದ ಇಣುಕಲು ಸಾಧ್ಯವಾಯಿತು. ಮೆಲ್ಲಗೆ ಹೋಗಿ ನೋಡಿದರೆ, ಮೂರು ಪುಟ್ಟ ಮೊಟ್ಟೆಗಳಿದ್ದವು.

ಕಪ್ಪು ಕತ್ತಿನ ರಾಜಹಕ್ಕಿಗೆ ಇಂಗ್ಲಿಷ್‌ನಲ್ಲಿ 'ಬ್ಲಾಕ್ ನೇಪ್ಡ್ ಮೊನಾರ್ಕ್ ಫ್ಲೈ ಕ್ಯಾಚರ್' ಎನ್ನುತ್ತಾರೆ. ಈ ಹಕ್ಕಿಗಳ ಕಾಲು ಗಿಡ್ಡವಾಗಿದ್ದು, ಪುಟ್ಟದಾಗಿ ಕಾಣುತ್ತವೆ. ಗಂಡುಹಕ್ಕಿ 16 ಸೆಂ.ಮೀ. ಉದ್ದವಿರುತ್ತದೆ.

ಹೋಲಿಕೆಯಲ್ಲಿ, ಹೆಣ್ಣಿಗಿಂತ ಗಂಡು ರಾಜಹಕ್ಕಿಯೇ ಬಲು ಸುಂದರ. ಗಂಡುಹಕ್ಕಿಯ ತಲೆ ಮೇಲೆ, ಕೊಕ್ಕಿನ ಬಳಿ ಹಾಗೂ ಕುತ್ತಿಗೆಯಲ್ಲಿ ಕಪ್ಪು ಬಣ್ಣವಿರುವುದರಿಂದ ಮೋಹಕವಾಗಿ ಕಾಣುತ್ತದೆ. ಹೆಣ್ಣು ಹಕ್ಕಿಗೆ ತಲೆ ಮೇಲೆ ಕಪ್ಪು ಪಟ್ಟಿಯಿಲ್ಲ. ಬಣ್ಣದಲ್ಲೂ ಕೊಂಚ ವ್ಯತ್ಯಾಸ. ರೆಕ್ಕೆ ಹಾಗೂ ಬೆನ್ನಿನ ಭಾಗ ಕಂದುಬಣ್ಣದ್ದಾಗಿದ್ದು, ದೇಹ ಮಬ್ಬು ತಿಳಿನೀಲಿ– ಕಂದು ಬಣ್ಣ ಮಿಶ್ರಿತವಾಗಿರುತ್ತದೆ.

## ಮಿಲನದ ವೇಳೆ ಆಕರ್ಷಕ ಬಣ್ಣ

ಈ ಹಕ್ಕಿಗಳದ್ದು ಮೇ ತಿಂಗಳಿಂದ ಜುಲೈವರೆಗೆ ಸಂತಾನಾಭಿವೃದ್ಧಿ ಕಾಲ. ಈ ಮಿಲನ ಸಮಯದಲ್ಲಿ, ಮೊದಲೇ ಸುಂದರನಾದ ಗಂಡು ಹಕ್ಕಿ ಮತ್ತಷ್ಟು ಮೋಹಕವಾಗಿ ಕಾಣುತ್ತದೆ. ಅದರ ನೀಲಿ ಮೈಬಣ್ಣ ಇನ್ನಷ್ಟು ಆಕರ್ಷಕವಾಗಿ ಬದಲಾಗುತ್ತದಂತೆ.

ಮಿಲನದ ನಂತರ ಸಂಸಾರ ಹೂಡಲು ಈ ಹಕ್ಕಿಗಳು ಅಣಿಯಾಗುವ ರೀತಿಯೂ ಕುತೂಹಲಕಾರಿ. ಪುಟ್ಟ ಮರಗಳ ಕವಲಿನಂಥ ಜಾಗದಲ್ಲಿ ಚಿಕ್ಕದಾಗಿ ಗೂಡು ಕಟ್ಟಿಕೊಳ್ಳುವುದು ಇವಕ್ಕೆ ಇಷ್ಟ. ಮನೆ ಕಟ್ಟುವಲ್ಲಿ ಹೆಣ್ಣು ಹಕ್ಕಿಗೆ ಹುಮ್ಮಸ್ಸು ಹೆಚ್ಚೇ. ಮನೆ ಮಾಡುವ ಜವಾಬ್ದಾರಿಯೇನಿದ್ದರೂ ಹೆಣ್ಣಿನದ್ದು. ವಾರಗಟ್ಟಲೆ ದಾರ, ನೂಲು, ಶಿಲೀಂಧ್ರ, ಜೇಡರ ಬಲೆಯನ್ನು ಎಲ್ಲೆಲ್ಲಿಂದಲೋ ಹೆಕ್ಕಿ ತಂದು ಕವಲಿನ ನಡುವೆ ಗಟ್ಟಿಯಾಗಿ ಕೂರುವಂತೆ ಜತನದಿಂದ ಗೂಡು ಕಟ್ಟಿ ನಿಟ್ಟುಸಿರುಬಿಡುತ್ತದೆ. ಗಂಡಿನದ್ದು ಗೂಡಿನ ಕಾವಲು ಕೆಲಸ.

ಗೂಡು ಕಟ್ಟುವಲ್ಲೂ ಈ ಹಕ್ಕಿಗಳದ್ದು ಜಾಣ್ಮೆಯಂತೆ. ಗೂಡನ್ನು ಅಲಂಕೃತವಾಗಿ ಮಾತ್ರವಲ್ಲ, ಯಾವುದೇ ಸೋಂಕಿನ ವಿರುದ್ಧ ಪ್ರತಿಜೀವಕ ಸೃಷ್ಟಿಸುವ ಶಿಲೀಂಧ್ರವನ್ನೂ ಗೂಡಿನಲ್ಲಿ ಬೆರೆಸಿ ಮರಿಹಕ್ಕಿಗಳಿಗೆ ಯಾವುದೇ ಕಾಯಿಲೆ ಬರದಂತೆ ತಡೆಯುತ್ತವಂತೆ.

ಅಂತೂ ಮೊಟ್ಟೆ ಇಡುವ ಸಮಯಕ್ಕೆ ಗೂಡು ರೆಡಿ! ಬೆಚ್ಚಗಿನ ಗೂಡಿನಲ್ಲಿ ಎರಡು ಮೂರು ಮೊಟ್ಟೆಗಳನ್ನಿಟ್ಟ ನಂತರ ಇವುಗಳ ಜವಾಬ್ದಾರಿ ಇನ್ನಷ್ಟು ಹೆಚ್ಚಾಗುತ್ತದೆ. ಸರದಿಯಂತೆ, ಗಂಡು– ಹೆಣ್ಣು ಹಕ್ಕಿಗಳೆರಡೂ ಕಾವು ಕೊಟ್ಟು ಸುಮಾರು ಹನ್ನೆರಡು ದಿನಗಳಲ್ಲಿ ಮೊಟ್ಟೆಯೊಡೆಯುತ್ತವೆ.